# ಲೊಳಲೊಟ್ಟೆ ಎಲ್ಲಾ ಲೊಳಲೊಟ್ಟೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 509.
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page No. 133.
3. **Ref.:** Shri Purandara Dasara Sahitya Part – 5, Loka Neeti, edited by Shri Betageri Krishna Sharma and Shri Bengeri Huchha Rayaru, page No. 54.
4. **Note:** Lyrics mentioned here are as per Ref. 1. The wordings in Ref. 2 are same as in Ref. 1. The wordings in Ref. 3 are slightly different and are given separately in green highlights.
5. **Note:** Singer has followed lyrics as in Ref. 1.

ರಾಗ: ಶಂಕರಾಬಾರಣ ತಾಳ: ಅಟ

ಲೊಳಲೊಟ್ಟೆ ಎಲ್ಲಾ ಲೊಳಲೊಟ್ಟೆ ॥ ಪ ॥

ಆನೆ ಕುದುರೆ ಒಂಟೆ ಲೊಳಲೊಟ್ಟೆ, ಬಲು
ಸೇನೆ ಭಂಡಾರವು ಲೊಳಲೊಟ್ಟೆ
ಮಾನಿನಿಯರ ಸಂಗ ಲೊಳಲೊಟ್ಟೆ, ದೊಡ್ಡ
ಕ್ಷೋಣೀಶನೆಂಬುದು ಲೊಳಲೊಟ್ಟೆ ॥ 1 ॥

ಮುತ್ತು ಮಾಣಿಕ್ಯ ಲೊಳಲೊಟ್ಟೆ, ಚಿನ್ನ
ಛತ್ರ ಚಾಮರ ಧ್ವಜ ಲೊಳಲೊಟ್ಟೆ
ಸುತ್ತಗಲ ಕೋಟೆ ಲೊಳಲೊಟ್ಟೆ, ಮತ್ತೆ
ಉತ್ತಮ ಪ್ರಭುತ್ವ ಲೊಳಲೊಟ್ಟೆ ॥ 2 ॥

ಕಂಟಕರೆಂಬೋರು ಲೊಳಲೊಟ್ಟೆ, ನಮ್ಮ
ನೆಂಟರು ಇಷ್ಟರು ಲೊಳಲೊಟ್ಟೆ
ಉಂಟಾದ ಗುಣನಿಧಿ ಪುರಂದರ ವಿಠಲನ್ನ
ಬಂಟನಾಗದವ ಲೊಳಲೊಟ್ಟೆ ॥ 3 ॥

**Note:** Below mentioned lyrics in green highlights are as per Ref. 3 above.

ರಾಗ: ಪೂರ್ವಿ ಕಲ್ಯಾಣಿ ತಾಳ: ಆದಿ

ಲೊಳಲೊಟ್ಟೆ ಬದುಕು ಲೊಳಲೊಟ್ಟೆ ॥ ಪ ॥

ಆನೆ ಕುದುರೆ ಮಂದಿ ಲೊಳಲೊಟ್ಟೆ, ಬಲು
ಸೈನ್ಯ ಭಂಡಾರವು ಲೊಳಲೊಟ್ಟೆ
ಮಾನಿನಿಯರ ಸಂಗ ಲೊಳಲೊಟ್ಟೆ, ಮಹಾ
ಮಾನ್ಯ ವಿಜಯರೆಲ್ಲ ಲೊಳಲೊಟ್ಟೆ ॥ ೧ ॥

ಮುತ್ತು ಮಾಣಿಕ ಚಿನ್ನ ಲೊಳಲೊಟ್ಟೆ, ಬಲು
ಛತ್ರ ಚಾಮರಗಳು ಲೊಳಲೊಟ್ಟೆ
ಸುತ್ತಗಳು ಕೋಟೆಯು ಲೊಳಲೊಟ್ಟೆ, ಅಲ್ಲಿ
ಸುತ್ತುವ ಜನವೆಲ್ಲ ಲೊಳಲೊಟ್ಟೆ ॥ ೨ ॥

ನಂಟರು ಇಷ್ಟರು ಲೊಳಲೊಟ್ಟೆ, ದೊಡ್ಡ
ಕಂಟಕನಾಹೋದು ಲೊಳಲೊಟ್ಟೆ,
ಉಂಟಾದ ಗುಣನಿಧಿ ಪುರಂದರ ವಿಠಲನ
ಬಂಟನಾಗದವ ಲೊಳಲೊಟ್ಟೆ ॥ ೩ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಈ ಪ್ರಾಪಂಚಿಕ ಐಶ್ವರ್ಯ, ವೈಭವ ಎಲ್ಲ ಬರಿಯ ತೋರಿಕೆ, ಸಂಸಾರ - ಸೌಭಾಗ್ಯಗಳು ಅಸ್ಥಿರ, ಎಂಬರ್ಥದ ಹಾಡು.

**ಲೊಳಲೊಟ್ಟೆ** – ಲೊಲ್ಲೊಟ್ಟೆ, ಲೊಳ್ ಹೊಟ್ಟೆ; ಒಳಗೆ ಏನೂ ಇರದು, ಬರಿಯ ತೋರಿಕೆ ಎಂಬರ್ಥ. “ಊರಿಗೆ ಹಬ್ಬ ನಾಯಿಗೆ ಲೊಲ್ಲೊಟ್ಟೆ” ಎಂಬ ಗಾದೆಯಿದೆ.

**ಕ್ಷೋಣೀಶ** – ಭೂಮಿಗೆ ಒಡೆಯ, ರಾಜ.

**ಕಂಟಕರೆಂಬೋರು** – ಆಧ್ಯಾತ್ಮಿಕ ಜೀವನಕ್ಕೆ ತೊಂದರೆ ಕೊಡುವವರು ಇರುತ್ತಾರೆ ಎಂಬುದು.

**ಉಂಟಾದ** – ಅರವಿಗೆ ಬಂದೊದಗಿದ.

**Classification:** Keerthane
**Ankita:** purandara vittala
**Location:** NA
**Category:** Loka Neeti, Jeevana Darshana, vairagya
**Sub-Category:** Ane, kudure, onTe, bangara, hengasu, arasa, muttu, manikya, bandhu, vairagya
**Pravachana:** NA
**Explanation:** NA